# ನಮ್ಮ ಜೊತೆ ಬರುವುದು ಲಕ್ಷ್ಮೀಯಲ್ಲ, ಸರಸ್ವತಿ

ಮಂಡಗದ್ದೆ ಪ್ರಕಾಶಬಾಬು ಕೆ.ಆರ್.

ಐಶ್ವರ್ಯದ ಅಧಿದೇವತೆ ಲಕ್ಷ್ಮಿಯ ಹಿನ್ನೆಲೆ, ಮುನ್ನೆಲೆ ಹಾಗೂ ದುಡ್ಡಿನ ಆರಾಧನೆ ಇವುಗಳಲ್ಲಿ ಅಗಾಧ ವ್ಯತ್ಯಾಸವಿದೆ. ಈ ದೃಷ್ಟಿಯಿಂದ ನಾವು ತಾತ್ತ್ವಿಕ ವಿವೇಕವನ್ನು ಹೊಂದಿ ಜೀವನವನ್ನು ನಡೆಸಬೇಕೆಂಬ ವಿಚಾರವನ್ನು ಇಲ್ಲಿ ವಿವರಿಸಿರುವ ಲೇಖಕರು ಧರ್ಮ, ಸಂಸ್ಕೃತಿಗಳ ಚಿಂತಕರು. ಬೆಂಗಳೂರು ರಾಮಕೃಷ್ಣ ಮಠದ ಭಕ್ತರೂ ಆಗಿರುವ ಅವರ ಅನೇಕ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕೆಲವು ಗ್ರಂಥಗಳನ್ನೂ ಅವರು ರಚಿಸಿದ್ದಾರೆ.

‘‘ಈ ಹಣದ ಮೋಡಿ ಎಂತಹದೆಂದರೆ ನೀನು ಅದಕ್ಕೆ ಎಷ್ಟು ಒಳಗಾಗುವೆಯೋ ಅಷ್ಟು ಅದು ನಿನ್ನನ್ನು ಮರುಳುಗೊಳಿಸುವುದು. ನಾನು ಹಣವನ್ನು ಮೀರಿ ನಿಂತಿರುವೆ, ಅದನ್ನು ನಾನು ತ್ಯಾಗ ಮಾಡಿಬಿಟ್ಟಿರುವುದರಿಂದ ಇನ್ನು ಅದು ನನ್ನನ್ನು ಮರುಳುಗೊಳಿಸಲಾರದು ಎಂದು ನೀನೇನೋ ಭಾವಿಸಬಹುದು. ಆದರೆ ಹಾಗಲ್ಲ ಮಗು, ಎಂದಿಗೂ ಈ ಭಾವನೆಯನ್ನು ನಿನ್ನ ಮನಸ್ಸಿನಲ್ಲಿ ಸುಳಿಯಗೊಡಬೇಡ. ದೌರ್ಬಲ್ಯದ ಒಂದು ಸಣ್ಣ ರಂಧ್ರವಿದ್ದರೂ ಸಾಕು, ಅದರ ಮೂಲಕ ಈ ಭಾವನೆ ನಿನ್ನ ಮನಸ್ಸಿನೊಳಗೆ ಪ್ರವೇಶಿಸಿ, ನಿನಗೇ ತಿಳಿಯದಂತೆ ಕ್ರಮೇಣ ನಿನ್ನನ್ನು ಹಿಸುಕಿಹಾಕಿಬಿಡುವುದು.’’

— ಶ್ರೀಮಾತೆ ಶಾರದಾದೇವಿ

ಈಗ ವಿಶ್ವದೆಲ್ಲಾ ಕಡೆ ಹರಡಿರುವ ಈ ಕೊರೋನಾ ಕಾಯಿಲೆ ಎಲ್ಲರನ್ನು ತಲ್ಲಣಗೊಳಿಸಿ ಲಕ್ಷಾಂತರ ಮಂದಿಯನ್ನು ಬಲಿ ತೆಗೆದುಕೊಂಡಿದೆ. ಈ ವಿಷಯ ಎಲ್ಲರಿಗೂ ತಿಳಿದಿರುವುದೇ. ಎಷ್ಟೋ ಮಂದಿಗೆ ಹಣ ಒಂದು ಇದ್ದರೆ ಆ ಮೃತ್ಯುವನ್ನು ಜಯಿಸಬಹುದು ಎಂಬ ಭಾವನೆ ಇತ್ತು. ಆದರೆ ಅದು ಆ ಸಮಯದಲ್ಲಿ ಉಪಯೋಗಕ್ಕೆ ಬಂದಿರುವುದಿಲ್ಲ. ಹಾಗಾದರೆ ಈ ಹಣಕ್ಕೆ ಬೆಲೆ ಇಲ್ಲವೆ? ಖಂಡಿತವಾಗಿಯೂ ಇದೆ. ನಮ್ಮ ಬಹುತೇಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಅದೊಂದು ಬಹು ಮುಖ್ಯ ಸಾಧನ ಅಷ್ಟೆ. ಬಹಳ ಜನ ಈ ಸಾಧನವನ್ನೇ ಸಿದ್ಧಿಯೆಂದು ಭ್ರಮಿಸಿಬಿಡುತ್ತಾರೆ. ಇಲ್ಲಿ ಮುಖ್ಯವಾದ ವಿಷಯ ಎಂದರೆ ಹಣ ಎಂದಿಗೂ ತನ್ನಷ್ಟಕ್ಕೇ ಗುರಿಯಾಗಲಾರದು ಎಂದು ತಿಳಿದಿರುವುದೇ ವಿವೇಕ. ಈ ಹಣದಿಂದ ಬೇಕಾದ ಕಾರ್ಯ ಮಾಡಬಲ್ಲೆ ಎನ್ನುವವನಿಗೆ, ಈ ಹಣವೇ ತನ್ನನ್ನು ಹಿಡಿದುಕೊಂಡು ಬೇಕಾದ್ದನ್ನೆಲ್ಲಾ ಮಾಡುತ್ತಿದೆಯೆಂಬುದು ಗೊತ್ತಿಲ್ಲವಲ್ಲ! ಅಲ್ಲದೆ ಈ ಹಣವನ್ನು ಮಾಡಿದವನು ತಾನೇ ಎಂಬುದನ್ನು ಕೂಡ ಮರೆತುಬಿಟ್ಟಿರುತ್ತಾನೆ.

ಕೆಲವು ತಿಂಗಳ ಕೆಳಗೆ ಹೊರ ದೇಶವಾದ ಅಮೇರಿಕಾದಲ್ಲಿ ನಡೆದ ಘಟನೆ ಎಲ್ಲಾ ಮೊಬೈಲ್‌ನಲ್ಲಿ ಹರಿದಾಡಿತ್ತು. ಅದು ಏನೆಂದರೆ ಅಮೇರಿಕದ ವ್ಯಕ್ತಿ ಒಬ್ಬನಿಗೆ ಕೊರೋನ ಕಾಯಿಲೆ ಬಂದಿತ್ತು. ಆತ ಕೋಟ್ಯಾಧಿಪತಿ. ಈ ಹಣದಿಂದ ನಾನು ಮೃತ್ಯುವನ್ನು ಗೆಲ್ಲಬಹುದು ಎಂದು ಅವನಿಗೆ ಬಹಳ ಭರವಸೆ ಇತ್ತು. ಆದರೆ ಆ ಹಣ ಯಾವುದೇ ಉಪಯೋಗಕ್ಕೆ ಬಾರದೆ, ಪ್ರಾಣ ಬಿಡುವಾಗ ತನ್ನಲ್ಲಿದ್ದ ಹಣವನ್ನು (ಡಾಲರ್) ಹೊರಗೆ ಚೆಲ್ಲಿದ. ಇದರ ಅರ್ಥ, ಹಣ ಒಂದು ಇದ್ದರೆ ಜೀವ ಉಳಿಸಬಹುದು ಎಂಬುದು ಭ್ರಮೆ ಅಷ್ಟೆ ಎಂದು ತಿಳಿಯುವುದು.

ಜೀವನಕ್ಕೆ ಧನವೇ (ಹಣ) ಮೂಲವೆಂದು ಭಾವಿಸುತ್ತೇವೆ. ಅಂತಹ ಧನಕ್ಕೆ ಮೂಲ ಆಗಿರುವವಳು ‘ಲಕ್ಷ್ಮೀ’ದೇವಿ. ಲಕ್ಷ್ಮೀ ಎಂಬ ಪದ ಕಿವಿಗೆ ಬಿದ್ದಾಗ ಏನೋ ರೋಮಾಂಚನ ಹಾಗೂ ಶುಭಕರವಾದ ಮಾಂಗಲ್ಯಮಯವಾದ ಭಾವನೆ ಮನದಲ್ಲಿ ಮೂಡುತ್ತದೆ. ಮಾತಿಗೆ ನಿಲುಕದ ಸುಂದರ ಕಲ್ಪನೆ ಹೆಣೆದುಕೊಳ್ಳುತ್ತದೆ. ಈ ಲಕ್ಷ್ಮಿಯ ಹುಟ್ಟಿನ ಕಥೆ ಅದ್ಭುತವಾಗಿದೆ.

## ಲಕ್ಷ್ಮಿಯ ಜನನ

ಹಿಂದೂ ಪುರಾಣಗಳಲ್ಲಿ, ತಂತ್ರಶಾಸ್ತ್ರಗಳಲ್ಲಿ ಈ ಶಕ್ತಿಯನ್ನು ‘ಸ್ತ್ರೀ’ ರೂಪವಾಗಿ, ದೇವಿಯಾಗಿ, ಪುರುಷದೇವತೆಯ ಸಂಗಾತಿಯಾಗಿ ತೋರಿಸಿದ್ದಾರೆ. ತ್ರಿಮೂರ್ತಿಗಳಲ್ಲಿ ಪ್ರತಿಯೊಬ್ಬರೂ ಈ ಶಕ್ತಿ ಅಥವಾ ದೇವಿಯನ್ನು ತಮ್ಮ ಸಂಗಾತಿಯನ್ನಾಗಿ ಮಾಡಿಕೊಂಡಿದ್ದಾರೆ. ಬ್ರಹ್ಮನಿಗೆ ಸರಸ್ವತಿ, ವಿಷ್ಣುವಿಗೆ ಲಕ್ಷ್ಮೀ ಹಾಗು ಶಿವನಿಗೆ ಪಾರ್ವತಿ.

ಸಾಮಾನ್ಯವಾಗಿ ವಿದ್ಯಾಧಿದೇವತೆಯಾದ ಸರಸ್ವತಿಗಿಂತ ಭಾಗ್ಯದೇವತೆ ಆದ ಲಕ್ಷ್ಮಿಯನ್ನು ಹೆಚ್ಚು ಜನ ಆರಾಧಿಸುವರು. ಜಗತ್ ಪಾಲಕನಾದ ಮಹಾವಿಷ್ಣುವಿನ ಶಕ್ತಿಯಾಗಿ, ಅವನ ಹೃದಯೇಶ್ವರಿಯಾಗಿರುವ ಲಕ್ಷ್ಮಿಯನ್ನು ಜಗತ್ ಪೋಷಣೆಗೆ ಅವಶ್ಯವಾದ ವೃದ್ಧಿ, ಸಮೃದ್ಧಿಗಳ ಸಕಲ ಭಾಗ್ಯಗಳಾಗಿ ಪೂಜಿಸುವರು. ‘ಶ್ರೀ’ ಎಂದರೆ ಲಕ್ಷ್ಮೀ ಎಂದೇ; ಈಕೆಯನ್ನು ವೇದಗಳಲ್ಲಿ ಹಾಡಿ ಹೊಗಳಿರುವರು. ‘ಶ್ರೀ’ ಫಲ, ಶಕ್ತಿ, ಜಲ ಮತ್ತು ಕೃಷಿಗಳಿಗೆ ಸಂಬಂಧಪಟ್ಟ ದೇವತೆ. ಕಾಲಕ್ರಮದಲ್ಲಿ ಈ ವೇದದಲ್ಲಿ ಬರುವ ದೇವತೆ, ವೇದದಲ್ಲಿನ ನಿರುಪಮ ಸೌಂದರ್ಯವತಿ ಲಕ್ಷ್ಮಿಯೊಡನೆ ಒಂದಾದಳು.

## ‘ವಿಷ್ಣುಪುರಾಣ’ದಲ್ಲಿ ಲಕ್ಷ್ಮೀ

ವಿಷ್ಣುಪುರಾಣದ ಪ್ರಕಾರ ಲಕ್ಷ್ಮಿಯು ಭೃಗುಮಹರ್ಷಿಯ ಪುತ್ರಿ. ಭೃಗುಮಹರ್ಷಿಯ ಪತ್ನಿ ‘ಖ್ಯಾತಿ’ ಎಂಬುವಳು. ಇವ

ರಿಗೆ ಗಂಡು ಮಕ್ಕಳು ಮಾತ್ರ ಇದ್ದರು. ಖ್ಯಾತಿಗೆ ಹೆಣ್ಣು ಮಕ್ಕಳನ್ನು ಪಡೆಯಬೇಕು ಎಂಬ ಆಸೆಯುಂಟಾಯಿತು. ಅವಳು ಪತಿಯ ಅನುಮತಿ ಪಡೆದು ದೇವಿಯನ್ನು ಕುರಿತು ತಪಸ್ಸು ಮಾಡಿದಳು. ತಪಸ್ಸಿಗೆ ಮೆಚ್ಚಿ ಜಗನ್ಮಾತೆಯು ಪುತ್ರಿಯನ್ನು ಕರುಣಿಸಿದಳು. ಆಕೆಗೆ 'ಲಕ್ಷ್ಮೀ' ಎಂದು ಹೆಸರಿಟ್ಟರು. ಈ ಲಕ್ಷ್ಮೀ ಚಿಕ್ಕ ಹುಡುಗಿಯಾದರೂ ವಿಷ್ಣುವನ್ನು ಕುರಿತು ತಪಸ್ಸು ಮಾಡಿದಳು. ಅವಳ ತಪಸ್ಸಿಗೆ ಮೆಚ್ಚಿದ ವಿಷ್ಣುವು ನಾರಾಯಣನ ರೂಪದಲ್ಲಿ ಪ್ರತ್ಯಕ್ಷನಾಗಿ ವರವನ್ನು ಬೇಡು ಎನ್ನಲು, ''ಸ್ವಾಮಿ, ನಿಮ್ಮ ವಿಶ್ವರೂಪವನ್ನು ತೋರಿಸಿದರೆ ನಾನು ನಿಮ್ಮನ್ನು ನಂಬುತ್ತೇನೆ. ಆ ನಂತರ ನನ್ನನ್ನು ವಿವಾಹ ಮಾಡಿಕೊಳ್ಳಿ'' ಎಂದು ವರವನ್ನು ಬೇಡಿದಳು. ವಿಷ್ಣು ವಿಶ್ವರೂಪವನ್ನು ತೋರಿಸಿ ಶ್ರೀಲಕ್ಷ್ಮೀಯನ್ನು ಮದುವೆಯಾದನು, ಲಕ್ಷ್ಮೀ ಸಂಪತ್ತಿಗೆ ಅಧಿದೇವತೆಯಾದಳು ಎಂದು ವಿಷ್ಣುಪುರಾಣದಲ್ಲಿ ನಾವು ಕಾಣಬಹುದು. ಈ ಲಕ್ಷ್ಮೀಯೇ ಕ್ಷೀರಾಬ್ಧಿಯಿಂದ ಉದ್ಭವಿಸಿದಳು. ನಂತರ ವಿಷ್ಣುವಿನ ಪತ್ನಿಯಾದಳು. ವಾಮನಾವತಾರದಲ್ಲಿ ಪದ್ಮಳಾಗಿ, ಪರುಶುರಾಮವತಾರದಲ್ಲಿ ಧರಣಿಯಾಗಿ, ರಾಮವತಾರದಲ್ಲಿ ಸೀತೆಯಾಗಿ, ಕೃಷ್ಣಾವತಾರ ದಲ್ಲಿ ರುಕ್ಮಿಣಿಯಾಗಿ ಅವತರಿಸಿದವಳು ಈ ಲಕ್ಷ್ಮೀ.

## 'ಲಕ್ಷ್ಮೀ'ಯ ವರ್ಣನೆ

ಈ ಲಕ್ಷ್ಮೀಯನ್ನು ಸುಂದರಿ, ಲಾವಣ್ಯವತಿ ಎಂದು ವರ್ಣಿಸುವರು. ಈಕೆ ಕಮಲದ ಹೂವಿನ ಮೇಲೆ ಕುಳಿತು ಎರಡು ಕೈಗಳಲ್ಲಿ ಕಮಲದ ಹೂಗಳನ್ನು ಹಿಡಿದಿರುವಳು. ಆದ್ದರಿಂದ ಈಕೆಯನ್ನು ಪದ್ಮಕಮಲ ಎಂದು ಕರೆಯುತ್ತಾರೆ. ಅಲ್ಲದೆ ಕಮಲದ ಹೂವಿನ ಮಾಲೆಯನ್ನು ಧರಿಸಿರುವಳು. ಲಕ್ಷ್ಮೀಯ ಪಕ್ಕದಲ್ಲಿ ಎರಡು ಆನೆಗಳು ಕಲಶದಿಂದ ಲಕ್ಷ್ಮೀಗೆ ಜಲಾಭಿಷೇಕ ಮಾಡುತ್ತಿರುವುದು ನಾವು ಕಾಣುತ್ತೇವೆ. ಈ ಕಲಶವು ದೇವಕನ್ನಿಕೆಯರು ನೀಡಿರುವುದು. ಈ ಲಕ್ಷ್ಮೀಯ ಬಣ್ಣ ಬಂಗಾರದ ಹಳದಿ, ಅಥವಾ ಶ್ವೇತ. ಈ ಲಕ್ಷ್ಮೀಯು ತನ್ನ ನಾಲ್ಕು ಕೈಗಳಲ್ಲಿ ಪದ್ಮ, ಶಂಖ, ಅಮೃತ ಕಲಶ ಮತ್ತು ಬಿಲ್ವ ಫಲಕಗಳನ್ನು ಹಿಡಿದಿರುವಳು. ಈ ನಾಲ್ಕು ಕೈಗಳು ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷಗಳಿಗೆ ಸಂಕೇತ. ಅವಳ ಕೈಯಲ್ಲಿರುವ ಫಲ ತೆಂಗಿನಕಾಯಿ. ಇದರ ಅರ್ಥ ಸೃಷ್ಟಿಯ ಮೂರು ಹಂತಗಳಾದ ಸ್ಥೂಲ, ಸೂಕ್ಷ್ಮ, ಕಾರಣ. ಈ ಅಮೃತಕಲಶವು ಮೋಕ್ಷದ ಸಂಕೇತ. ಈ ಲಕ್ಷ್ಮೀಯ ವಾಹನ 'ಗೂಬೆ'. ಈ ಗೂಬೆಗೆ ಸಂಸ್ಕೃತದಲ್ಲಿ ಉಲೂಕ ಎಂದು ಹೆಸರು. ಇದು ಇಂದ್ರನ ಇನ್ನೊಂದು ಹೆಸರಾಗಿದೆ. ಇಂದ್ರನು ಸಕಲ ಸಂಪತ್ತನ್ನು ಕೊಡುವನು. ಆದ್ದರಿಂದ ಲಕ್ಷ್ಮೀಯ ವಾಹನ ಗೂಬೆ.

## ಅಲಕ್ಷ್ಮೀ

ಲಕ್ಷ್ಮೀಯ ತದ್ವಿರುದ್ಧ ದೇವತೆ ಅಲಕ್ಷ್ಮೀ. ಸಮುದ್ರಮಥನ ಕಾಲದಲ್ಲಿ ಇವಳ ಜನನವಾಯಿತು. ಲಕ್ಷ್ಮೀಗಿಂತ ಮೊದಲು ಜನನವಾಗಿದ್ದರಿದ ಈಕೆಯನ್ನು ಜ್ಯೇಷ್ಠಲಕ್ಷ್ಮೀ ಎನ್ನುವರು. ಅಧರ್ಮವೇ ಇವಳ ಪುತ್ರ, ಕಪಿಲ ಮುನಿ ಇವಳ ಪತಿ, ಅಲಕ್ಷ್ಮೀಯ ವಾಹನ 'ಕತ್ತೆ'. 'ಕಾಗೆ' ಇವಳ ಧ್ವಜದ ಸಂಕೇತ. ಇವಳನ್ನು ಭಕ್ತಿಯಿಂದ ಆರಾಧಿಸಿದರೆ ಭಾಗ್ಯವನ್ನು ನೀಡುವವಳು. ಇವಳ ದೇವಾಲಯಗಳು ಬಹಳ ವಿರಳ. ಜ್ಯೇಷ್ಠಮಾಸದಲ್ಲಿ ಪ್ರತಿ ಶುಕ್ರವಾರ ಈ ಜ್ಯೇಷ್ಠಲಕ್ಷ್ಮೀಯನ್ನು ಪೂಜಿಸುತ್ತಾರೆ.

ಲಕ್ಷ್ಮೀ ಒಲಿದರೆ ಬರುತ್ತಾಳೆ. ಆದರೆ ಬರುವಾಗ ಧರ್ಮದಂಡವನ್ನು ಕೈಯಲ್ಲಿ ಹಿಡಿದೇ ಬರುತ್ತಾಳೆ. ಕಾರಣ ಅವಳು ಸ್ವಯಂ ಧರ್ಮದಂಡ ಸ್ವರೂಪಳು. ಶ್ರೀದೇವಿಯನ್ನು ಭೂದೇವಿಯಲ್ಲಿ ಕಾಣಬೇಕು. ಆಗ ಭೂಸಂಬಂಧವಾದುವನ್ನು ಗಂಧ ಶಬ್ದದ ಮೂಲಕ ತಿಳಿಸಲಾಗಿದೆ. ಪಂಚತನ್ಮಾತ್ರೆಗಳಲ್ಲಿ ಗಂಧವೂ ಒಂದು. ಶ್ರೀಸೂಕ್ತದಲ್ಲಿ 'ಗಂಧದ್ವಾರಾಂ' ಎಂದು ಹೇಳುವುದರಲ್ಲಿ ಗಂಧದ ಮೂಲಕ ತಿಳಿಯಲ್ಪಡುವ ಪೃಥ್ವಿಯಾಗಿರುವ ಶ್ರೀಲಕ್ಷ್ಮೀಯನ್ನು ಪ್ರಾರ್ಥಿಸಲಾಗಿದೆ. ಗಂಧವು ಭೂಮಿಯ ಗುಣ. ಭೂಮಿಯಲ್ಲಿ ಶ್ರೀದೇವಿಯ ಖನಿಜ, ಸಸ್ಯ, ರತ್ನಾದಿಗಳು, ಲೋಹಗಳು, ಧಾನ್ಯ, ಪ್ರಾಣಿಸಂಕುಲ ಇತ್ಯಾದಿಗಳಲ್ಲಿದ್ದಾಳೆ. ಇದನ್ನು ಲಕ್ಷ್ಮೀಭಾವದಿಂದ ಪೂಜಿಸುವದರಲ್ಲಿ ಅರ್ಥವಿದೆ. ಈ ಕಾರಣದಿಂದಲೇ ಅಷ್ಟಲಕ್ಷ್ಮೀಯರು ಬಂದಿರುವುದು. ಅವರು ಯಾರು ಯಾರು ಎಂದರೆ, ಧನಲಕ್ಷ್ಮೀ, ಧೈರ್ಯಲಕ್ಷ್ಮೀ, ಸಂತಾನ ಲಕ್ಷ್ಮೀ, ವಿಜಯಲಕ್ಷ್ಮೀ, ಆದಿಲಕ್ಷ್ಮೀ, ಗಜಲಕ್ಷ್ಮೀ, ವಿದ್ಯಾಲಕ್ಷ್ಮೀ, ಧಾನ್ಯಲಕ್ಷ್ಮೀ.

ಈ ಲಕ್ಷ್ಮೀಯ ಪ್ರಭಾವ ಅನನ್ಯ. ಅವಳ ಕೃಪೆಯಿಂದಲೇ ಜೀವನ ಪಾವನ. ಇವಳು ನಿತ್ಯನೂತನ, ಇವಳಿಗೆ ಚರಾಚರ ವಿಶ್ವವೇ ಮಣಿಯುತ್ತದೆ. ಅಲ್ಲದೆ ಹುಚ್ಚೆದ್ದು ಕುಣಿಯುತ್ತದೆ. ಅವಳನ್ನು ಪ್ರಪಂಚವೇ ಬಯಸುತ್ತದೆ. ಆದರೆ ಅವಳು ಮಾತ್ರ ಬಯಸಿದವರಿಗೆಲ್ಲಾ ಮರೀಚಿಕೆ. ಬೇಕಾದಾಗ ಬರುತ್ತಾಳೆ. ಬೇಡವಾದಾಗ ಹೋಗುತ್ತಾಳೆ. ಹಣ ಗಳಿಸುವುದು ಮುಖ್ಯವಲ್ಲ. ಈ ಹಣ ಗಳಿಸುವ ಮಾರ್ಗ ವಾಮಮಾರ್ಗವಾಗಬಾರದು. ಲಕ್ಷ್ಮೀಯನ್ನು ಯಾವಾಗಲೂ ಸತ್ಕಾರ್ಯಕ್ಕೆ ಉಪಯೋಗಿಸಬೇಕು. ಜೀವನದಲ್ಲಿ ಲಕ್ಷ್ಮೀ ಬೇಕು ನಿಜ. ಆದರೆ ಎಷ್ಟು ಬೇಕೋ ಅಷ್ಟೇ ಇದ್ದರೆ ಒಳ್ಳೆಯದು. ಲಕ್ಷ್ಮೀ ಹೆಚ್ಚಾದಷ್ಟೂ ತೊಂದರೆಗಳು ಹೆಚ್ಚು. ಈ ಲಕ್ಷ್ಮೀ ಹರಿಯುವ ನದಿಯ ಹಾಗೆ ಹರಿಯುತ್ತಿರಬೇಕು. ಹರಿಯುವ ನೀರಿಗೆ ಶುದ್ಧತೆ ಇರುತ್ತದೆ. ಅಲ್ಲದೆ ಪವಿತ್ರತೆಯೂ ಇರುವುದು. ನಿಂತ ನೀರಿನಲ್ಲಿ ರೋಗ ರುಜಿನ ಹೆಚ್ಚು. ಹರಿಯುವ ನೀರಿಗೆ ದೋಷ ಇರುವುದಿಲ್ಲ. ಹಣ ಒಂದೆಡೆ ನಿಂತರೆ ತೊಂದರೆ, ದುಃಖ, ರೋಗ ರುಜಿನ ಹೆಚ್ಚು. ಈ ಉದ್ದೇಶಕ್ಕಾಗಿಯೇ ಎಲ್ಲಾ ಯುಗದಲ್ಲಿ ದಾನ-ಧರ್ಮಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುವುದು. ಹೆಣ್ಣು, ಹೊನ್ನು ಹಾಗೂ ಮಣ್ಣು ಮಾಯೆ ಎನ್ನುವರು. ಆದರೆ ಅಲ್ಲಮ ಪ್ರಭುಗಳು ಅವುಗಳು ಮಾಯೆ ಅಲ್ಲ; ನಿನ್ನ ಕಣ್ಣು ಮಾಯೆ ಎಂದರು. ಏಕೆಂದರೆ ನಾವು ನೋಡುವ ದೃಷ್ಟಿ ಸರಿಯಾಗಿರಬೇಕು. ಈ ಹಣ ಅಥವಾ ಸಂಪತ್ತು

ನಿನ್ನೆ ಯಾರದೋ ಆಗಿತ್ತು. ಈ ದಿನ ನಿನ್ನದಾಗಿದೆ. ನಾಳೆ ಅದು ಬೇರೆಯವರದಾಗಿರುತ್ತದೆ. ಕಳೆದುಕೊಂಡೆ ಎಂದು ಏಕೆ ಚಿಂತಿಸುತ್ತಿರುವೆ, ಕಳೆದುಕೊಳ್ಳಲು ನೀನು ಏನನ್ನು ತಂದಿರುವೆ? ಬರುವಾಗ ನೀನು ಏನನ್ನೂ ತರಲಿಲ್ಲ, ಹೋಗುವಾಗಲೂ ಏನನ್ನು ತೆಗೆದುಕೊಂಡು ಹೋಗುವುದಿಲ್ಲ. ಇಲ್ಲಿ ನಿನ್ನದೆಂಬುದು ಏನೂ ಇಲ್ಲ.

ಶ್ರೀರಾಮಕೃಷ್ಣ ಪರಮಹಂಸರ ಜೀವನದಲ್ಲಿ ಒಂದು ವಿಶೇಷ ಘಟನೆ ನಡೆಯುವುದು. ಅವರು ಒಂದು ದಿನ ಗಂಗಾನದಿ ತೀರಕ್ಕೆ ಹೋಗಿ ಒಂದು ಕೈಯಲ್ಲಿ ಹಣ, ಇನ್ನೊಂದು ಕೈಯಲ್ಲಿ ಮಣ್ಣು ಹಿಡಿದುಕೊಂಡು ನಿಂತು, ಅವುಗಳೆರಡನ್ನೂ ವಿಮರ್ಶೆ ಮಾಡಿ ಅವೆರಡೂ ಒಂದೇ ಎಂಬ ನಿರ್ಧಾರಕ್ಕೆ ಬಂದು ಅವೆರಡನ್ನೂ ನದಿಗೆ ಬಿಸಾಡುವರು. ಅವರೆನ್ನುತ್ತಾರೆ ತಕ್ಷಣ ಅವರಿಗೆ ಕಳವಳವಾಯಿತಂತೆ. ಇದರಿಂದ ನಾನು ಲಕ್ಷ್ಮಿಗೆ ಏನಾದರೂ ತಪ್ಪು ಮಾಡಿರಬಹುದು. ಅವಳು ನನ್ನ ಅಹಾರವನ್ನು ನಿಲ್ಲಿಸಿದರೆ ಏನು ಗತಿ? ತಕ್ಷಣವೇ ಮನಸ್ಸಿನಲ್ಲಿ ಆಲೋಚನೆ ಬಂತಂತೆ, 'ಹೇ, ತಾಯಿ ಲಕ್ಷ್ಮಿ, ನನ್ನ ಹೃದಯವನ್ನು ನಿನ್ನ ಪೀಠವನ್ನಾಗಿ ಮಾಡು. ನಿನ್ನ ಯಾವ ಐಶ್ವರ್ಯವೂ ನನಗೆ ಬೇಕಾಗಿಲ್ಲ' ಎಂದು. ಅಂದರೆ ಅವರು ಲಕ್ಷ್ಮಿಯನ್ನು ತಿರಸ್ಕಾರ ಭಾವದಿಂದ ನೋಡಲಿಲ್ಲ.

ಶ್ರೀ ಶಂಕರಾಚಾರ್ಯರು ಗುರುಕುಲದಲ್ಲಿದ್ದಾಗ ನಡೆದ ಅದ್ಭುತ ಘಟನೆ ಇದು. ಬಾಲಕ ಶಂಕರರು ಗುರುಕುಲದ ಸಂಪ್ರದಾಯದಂತೆ ಒಂದು ದಿನ, ಭಿಕ್ಷೆಗಾಗಿ ತನ್ನ ಊರಿನ ಸಮೀಪದ ಒಬ್ಬ ಬ್ರಾಹ್ಮಣನ ಮನೆ ಮುಂದೆ ನಿಂತು 'ಭವತಿ ಭಿಕ್ಷಾಂ ದೇಹಿ' ಎಂದು ಹೇಳಿದರು. ಆ ಸಮಯದಲ್ಲಿ ಮನೆಯ ಯಜಮಾನರು ಇರಲಿಲ್ಲ. ಮನೆ ಒಡತಿ ಬಂದು ನೋಡಿದಳು. ವಟುವಿಗೆ ಭಿಕ್ಷೆ ಹಾಕಲು ಮನೆಯಲ್ಲಿ ಒಂದು ಕಾಳು ಅಕ್ಕಿ ಕೂಡ ಇರಲಿಲ್ಲ. ಗೃಹಿಣಿಯು ಮನೆಯಲ್ಲಾ ಹುಡುಕಿ ಒಂದು ಒಣಗಿದ ನೆಲ್ಲಿಕಾಯಿಯನ್ನು ತಂದು, ಅಳುತ್ತಾ, ತನ್ನ ಸಂಕಷ್ಟಗಳನ್ನು ಹೇಳಿ ಸಂಕೋಚದಿಂದಲೇ ಆ ವಟುವಿಗೆ ಆ ನೆಲ್ಲಿಕಾಯಿಯನ್ನು ಭಿಕ್ಷೆಯಾಗಿ ನೀಡಿದಳು. ಶಂಕರರು ಗೃಹಿಣಿಯ ದುಃಸ್ಥಿತಿಯನ್ನು ನೋಡಿ ಮರುಕದಿಂದ ಶ್ರೀ ಮಹಾಲಕ್ಷ್ಮಿದೇವಿಯನ್ನು ಪ್ರಾರ್ಥಿಸಲು ಉಪಕ್ರಮಿಸಿದರು. ಆ ಪ್ರಾರ್ಥನೆಯ ಸ್ತೋತ್ರವೇ ಹದಿನಾರು ಶ್ಲೋಕದ 'ಕನಕಧಾರಾ ಸ್ತೋತ್ರ'. ಆಗ ತಕ್ಷಣ ಪವಾಡವೇ ನಡೆದು ಪ್ರಾರ್ಥನೆಗೆ ಲಕ್ಷ್ಮಿಯು ಸುಪ್ರೀತಳಾಗಿ, ಪ್ರತ್ಯಕ್ಷಳಾಗಿ 'ಈ ಬಡತನ ಆಕೆಯ ಪೂರ್ವಜನ್ಮದ ಫಲ. ಆದ್ದರಿಂದ ಅದನ್ನು ಆಕೆ ಅನುಭವಿಸಬೇಕು' ಎಂದಳು. ಬಾಲಕ ಶಂಕರ, 'ಅಮ್ಮಾ ಈ ಜನ್ಮದಲ್ಲಿ ಉಡುಗೊರೆ ನೀಡಿದಂತೆ ಈ ದರಿದ್ರತೆಯಲ್ಲೂ ಅವರು ನೀಡಿದ ನೆಲ್ಲಿಕಾಯಿಗೆ ಪ್ರತಿಫಲವಾಗಿ ಏನಾದರೂ ಕೊಡಬೇಡವೆ?' ಎಂದು ಮುಗ್ಧವಾಗಿ ಪ್ರಶ್ನಿಸಿದಾಗ ಲಕ್ಷ್ಮಿಯು ಬಾಲಕನ ಬುದ್ಧಿಗೆ ಮೆಚ್ಚಿ, ಬಂಗಾರದ ನೆಲ್ಲಿಕಾಯಿಯ ಮಳೆಯನ್ನೇ ಸುರಿಸಿದಳಂತೆ. ಆ ತಾಯಿಯ ಬಡತನವೂ ನಿವಾರಣೆಯಾಯಿತು. ಈ ಹಿಂದೆ ನಾನು ಕಾಲಡಿಗೆ ಹೋದಾಗ ಆ ಮನೆಯ ಪೂರ್ವಜರನ್ನು ಮಾತನಾಡಿಸಿ ಬಂದಿದ್ದೆ. ಶಂಕರಾಚಾರ್ಯರು ಲಕ್ಷ್ಮಿಯ ಮೇಲೆ ಅನೇಕ ಸ್ತೋತ್ರಗಳನ್ನು ರಚಿಸಿದ್ದಾರೆ. ಹಣದ ತೊಂದರೆ ಇದ್ದಾಗ ಕನಕಧಾರಾ ಸ್ತೋತ್ರವನ್ನು ಭಕ್ತಿಯಿಂದ ಪಠಿಸಬೇಕು ಎನ್ನುತ್ತಾರೆ.

ಈಗಿನ ಕಾಲದಲ್ಲಿ ಹಣದಿಂದ ಏನು ಬೇಕಾದರೂ ಸಾಧಿಸಬಹುದು ಎಂಬುದು ಜನಗಳ ಅಭಿಪ್ರಾಯವಾಗಿದೆ. ಹಣದ ಜೊತೆಯಲ್ಲಿ ಸರಸ್ವತಿಯೂ (ಬುದ್ಧಿ) ಇರಬೇಕು. ಈ ಕೊರೋನ ಸಮಯದಲ್ಲಿ ಜೀವ ಉಳಿಸಲು ಎಷ್ಟಾದರೂ ಹಣಕೊಡಲು ಸಿದ್ಧರಿದ್ದಾರೆ. ಆದರೆ ಹಣದಿಂದ ಮಾತ್ರ ಮೃತ್ಯುವನ್ನು ಗೆಲ್ಲಲಾಗುವುದಿಲ್ಲ ಎಂದು ಈ ಕಾಯಿಲೆ ನಮಗೆ ಪಾಠ ಕಲಿಸಿದೆ.

## 'ನಮ್ಮೊಂದಿಗೆ ಬರುವುದು ಸರಸ್ವತಿ ಮಾತ್ರ'

ರಾಮ ಹಾಗೂ ರಾವಣರ ಯುದ್ಧದಲ್ಲಿ ರಾವಣ ಸೋತು ಧರೆಗೆ ಉರುಳಿರುತ್ತಾನೆ. ಪ್ರಾಣಪಕ್ಷಿ ಇನ್ನೂ ಹೋಗಿರುವುದಿಲ್ಲ. ಆಗ ಶ್ರೀರಾಮನು ತನ್ನ ಶಸ್ತ್ರಾಸ್ತ್ರಗಳನ್ನೆಲ್ಲಾ ಬದಿಗೆ ಇಟ್ಟು ರಾವಣನ ಹತ್ತಿರ ಹೋಗಿ, ''ವಿಪ್ರೋತ್ತಮನೇ ನಿನ್ನೊಳಗಿನ ಜ್ಞಾನವನ್ನು ನನ್ನೊಂದಿಗೆ ಹಂಚಿಕೋ'' ಎನ್ನುತ್ತಾನೆ. ಆಗ ರಾವಣ, ''ಹೇ, ರಾಮ, ನೀನು ವಿದ್ಯಾರ್ಥಿಯಂತೆ ನನ್ನ ಪಾದದ ಬಳಿ ಬಂದು ಕುಳಿತು ಬೇಡಿದೆ. ನನಗೆ ತಿಳಿದಷ್ಟು ಜ್ಞಾನವನ್ನು ನಿನ್ನೊಂದಿಗೆ ಹಂಚಿಕೊಳ್ಳಲು ಬಯಸುವೆ. ಮನಸ್ಸು ತನ್ನ ಒಳಿತಿಗಾಗಿ ಬೇಕಾದ ವಿಷಯವನ್ನು ತನ್ನೊಳಗೆ ಇಟ್ಟುಕೊಳ್ಳಬಯಸುತ್ತದೆ. ಕೆಟ್ಟದ್ದನ್ನು ಹೊರ ಹಾಕಲು ಯೋಚಿಸುತ್ತದೆ. ಬುದ್ಧಿವಂತನಾದವನು ಮನಸ್ಸಿನ ಚತುರತೆಯನ್ನು ಅರ್ಥ ಮಾಡಿಕೊಳ್ಳಬೇಕು.'' ರಾಮಾಯಣದ ಈ ಪ್ರಸಂಗವು ಗುರುಶಿಷ್ಯರ ನಡುವಿನ ಸಂಬಂಧವನ್ನು ತೋರಿಸಿಕೊಡುತ್ತದೆ. ಕೆಟ್ಟ ಶಿಷ್ಯ ಅಥವಾ ಸಾಮಾನ್ಯ ಮನುಷ್ಯ ಗುರುವನ್ನು ಗೌರವಿಸುವುದಿಲ್ಲ. ಒಳ್ಳೆಯ ವಿದ್ಯಾರ್ಥಿ ಗುರುವನ್ನು ಗೌರವಿಸುತ್ತಾನೆ. ರಾಮನಲ್ಲಿ ಅಂತಹ ಗುಣವಿತ್ತು. ರಾಮನು ರಾವಣನ ಬಾಹ್ಯ ಸಂಪತ್ತನ್ನು ಬಯಸಲಿಲ್ಲ. ಆತನ ಆಂತರಿಕ ಸಂಪತ್ತನ್ನು ಹೊಂದಲು ಬಯಸಿದ. ಸಂಪತ್ತನ್ನು ಯಾರು ಬೇಕಾದರೂ ಹೇಗೆ ಬೇಕಾದರೂ ಸಂಪಾದಿಸಬಹುದು. ಆದರೆ ಜ್ಞಾನವನ್ನು ಹೊಂದುವುದು ಅಷ್ಟು ಸುಲಭವಲ್ಲ. ವ್ಯಕ್ತಿ ಕೊನೆಯುಸಿರನ್ನು ಎಳೆಯುವಾಗ ಅವನು ತನ್ನೊಳಗಿನ ಜ್ಞಾನವನ್ನಷ್ಟೇ ತೆಗೆದುಕೊಂಡು ಹೋಗುತ್ತಾನೆ. ಐಹಿಕ ಭೋಗವಲ್ಲ. ಆದ್ದರಿಂದ ಹೇಳುತ್ತಾರೆ, ಲಕ್ಷ್ಮಿ ನಮ್ಮೊಂದಿಗೆ ಬರುವುದಿಲ್ಲ. ಕೇವಲ ಸರಸ್ವತಿ ಮಾತ್ರ ಬರುವುದು ಎಂದು. 'ಬರುವಾಗ ಬೆತ್ತಲೆ, ಹೋಗುವಾಗಲೂ ಬೆತ್ತಲೆ – ಈ ನಡುವೆ ಬರೀ ಕಾದಾಟ, ಜಗಳ, ದ್ವೇಷ, ಅಸೂಯೆ.' ಇದೆಲ್ಲ ಮರೆತು ಜೀವನ ನಡೆಸಿದರೆ ಅದುವೇ ನಿಜವಾದ ಜೀವನ.